ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

ಸಂಚಿಕೆ 1; ಸಂಪುಟ 14 ; ಜನವರಿ –ಏಪ್ರಿಲ್ 2020 ; ಅಂಕಣ- ಭರತಕೌತುಕ

# ಲಾಸ್ಯಾಂಗಗಳು

## (ನಾಟ್ಯಶಾಸ್ತ್ರ ಮತ್ತು ದೇಶೀಯ ಲಕ್ಷಣಗ್ರಂಥಗಳನ್ನು *ನೃತ್ತರತ್ನಾವಳಿಯನ್ನು ಪ್ರಧಾನವಾಗಿ ಅನುಲಕ್ಷಿಸಿ)

## ಭಾಗ ೨

ಕಾಂಚನ ರೋಹಿಣಿ ಸುಬ್ಬರತ್ನಂ
(ಸಂಗೀತ ವಿದ್ವಾಂಸರು, ಬೆಂಗಳೂರು ನಿವಾಸಿ)

(…ಮುಂದುವರಿದುದು)

## ಗೇಯಪದ

ಹತ್ತು ಲಾಸ್ಯಾಂಗಗಳೂ ಭಾಣವೆಂಬ ರೂಪಕವನ್ನು ಹೋಲುವಂತಹವು. ಗೇಯಪದವು ಶುಷ್ಕವೃಂದ, ಎಂದರೆ ತಂತೀ, ಸುಷಿರ ಹಾಗೂ ಲಯಗಳ ಸಂಗೀತವಾದ್ಯವೃಂದದೊಡನೆ ನಾಯಕಿಯು ತನ್ನ ಪ್ರಿಯನಿಗಾಗಿ ಕುಳಿತು ಗಾಯನ ಮಾಡಿ ಅದನ್ನೇ ಆಂಗಿಕವಾಗಿ ಅಭಿನಯಿಸುವುದು. ಭರತನು ಭಾಂಡ(ಚರ್ಮದ ಲಯವಾದ್ಯ) ಗಳನ್ನು ಸ್ಥಾನದಲ್ಲಿ ವ್ಯವಸ್ಥಿತವಾಗಿಟ್ಟು ತೆರೆಯನ್ನು ಸರಿಸಿದ ನಂತರ ಬ್ರಹ್ಮ ಸ್ಥಾನಕ್ಕೆ, ಪುಷ್ಪಗಳನ್ನು ಅರ್ಪಿಸಿ, ಮೃದಂಗಗಳನ್ನು ಸಾರಣೆ ಮಾಡಿದ ಮೇಲೆ, ತ್ರಿಸಾಮವನ್ನು ಹಾಡಿ, ಮೂರು ಕೊಳಲುಗಳನ್ನು ನುಡಿಸುತ್ತ, ಶುಷ್ಕ ಆಸಾರಿತವನ್ನು ಪ್ರಯೋಗಿಸಬೇಕು. ನಂತರ ಮಾರ್ಗಾಸಾರಿತ ತಾಲದಲ್ಲಿ ಅದನ್ನು ಪ್ರಯೋಗಿಸಬೇಕು. ಆಮೇಲೆ ಎರಡು ಕಲಾಗಳ ತ್ರ್ಯಸ್ರತಾಲದಲ್ಲಿ ಮೊದಲು ಉಪೋಹನವನ್ನು ಮಾಡಿ, ಮೊದಲು ಪುರುಷವಾಕ್ಯದಿಂದ ಪರಿವರ್ತನವನ್ನು ಮಾಡಬೇಕು. ಮೂರು ವಾಕ್ಯಗಳು ಪುರುಷವಾಕ್ಯ, ನಾಲ್ಕು ವಾಕ್ಯಗಳು ಸ್ತ್ರೀವಾಕ್ಯ ಎಂದೆನಿಸಿಕೊಳ್ಳುತ್ತದೆ. ಕೊನೆಗೆ ನಿರ್ವಹಣವನ್ನು ಪಡೆಯುವುದಕ್ಕಾಗಿ ಇದನ್ನು ಮಾಡಬೇಕು ಎಂಬ ವಿವರಗಳನ್ನೀಯುತ್ತಾನೆ. ಅಭಿನವಗುಪ್ತನು ಗೇಯಪದಕ್ಕೆ , ಇದು ಗಾಯಕರು ಆಸನದಲ್ಲಿ ಕುಳಿತು ವಾದ್ಯವೃಂದದ ಹಿಮ್ಮೇಳದೊಡನೆ ಗಾಯನ ಮಾಡುವುದೆಂದೂ, ಈ ಸಮಯದಲ್ಲಿ ಪಾತ್ರವು ವೇದಿಕೆಯಲ್ಲಿ ಇರುವುದಿಲ್ಲವೆಂದೂ ಐದು ಬಗೆಯ ಧ್ರುವಾಗಳನ್ನು ಆಲಾಪವಿಲ್ಲದೆ ಗಾಯನ ಮಾಡುವುದೆಂದೂ ವಿವರಿಸುತ್ತಾನೆ. ವಿಶ್ವನಾಥ ಕವಿರಾಜನು ತನ್ನ ಸಾಹಿತ್ಯದರ್ಪಣದಲ್ಲಿ ಗೇಯಪಾದವು ಆಸನದಲ್ಲಿ ಕುಳಿತು (ನೃತ್ತವಿಲ್ಲದೆ) ವೀಣೆಯೊಂದಿಗೆ ಶುದ್ಧ- ಗಾನವನ್ನು ಮುಖ್ಯವಾಗಿ ವೀಣಾ ಹಾಗೂ ಲಯವಾದ್ಯಗಳ ವೃಂದದೊಡನೆ ಗಾಯನ ಮಾಡುವುದು, ಎಂಬ ವಿವರಣೆಯನ್ನು ನೀಡಿದ್ದಾನೆ. ಅದಕ್ಕೆ ಉದಾಹರಣೆಯಾಗಿ ಹರ್ಷನ ನಾಗಾನಂದನ ನಾಟಕದ ಮೊದಲನೆಯ ಅಂಕದಲ್ಲಿ 'ಕೇಳು, ಮಲಯವತಿಯು ವೀಣೆಯೊಂದಿಗೆ ಗಾಯನವನ್ನು ಮಾಡುತ್ತ ಗೌರಿಯನ್ನು ಸ್ತುತಿಸುತ್ತಾಳೆ' —" ಅರಳುತ್ತಿರುವ ತಾವರೆಯಲ್ಲಿ ಹಳದಿಯ ಪರಾಗವು ಚೆಲ್ಲುವಂತೆ ತೋರುವ ಪ್ರಭಾಮಯಳಾದ ದೇವಿಯೇ ನನ್ನ ಇಷ್ಟಾರ್ಥಗಳು ಪೂರೈಸುವಂತೆ ಕರುಣಿಸು" ಎಂಬುದನ್ನು ನೀಡಿದ್ದಾನೆ. ಬರೋಡಾದಲ್ಲಿ ಸಂಪಾದನೆಗೊಂಡ ನಾಟ್ಯಶಾಸ್ತ್ರ ಗ್ರಂಥವು ಗೇಯಪದಕ್ಕೆ ಇನ್ನೊಂದು ರೀತಿಯ

Copyright protected

ವಿವರಣೆಯನ್ನು ಒಳಗೊಂಡಿದೆ. ಇದರಲ್ಲಿ ಗೇಯಪದದ ಪ್ರಬಂಧವು ಪ್ರಿಯತಮನ ಗುಣಗಳನ್ನು ವರ್ಣಿಸುವುದೆಂದೂ, ಇದನ್ನು ಒಬ್ಬ ಸ್ತ್ರೀಯು ಆಸನದಲ್ಲಿ ಕುಳಿತುಕೊಂಡೇ ಅಂಗಾಗಗಳ ಚಲನೆಯ ಮೂಲಕ ಅಭಿನಯಿಸುತ್ತಾಳೆಂಬ ವಿವರವನ್ನು ನೀಡಿ ಲಾಸ್ಯದ ಪ್ರಮುಖ ಲಕ್ಷಣವನ್ನು ನೀಡಿದೆ. ಅಭಿನವಗುಪ್ತನು ಗೇಯಪದವನ್ನು ಇದರಲ್ಲಿ ವಾದ್ಯಸಂಗೀತವು ಮುಖ್ಯವಾಗಿದ್ದು ಗಾಯನರು (ಪಾತ್ರಗಳು) ಶುಷ್ಕವಾಗಿ ದ್ವಂದ್ವಾರ್ಥ ನೀಡುವ ಗೀತಗಳನ್ನೋ ಅಥವಾ ನಿರ್ಗೀತ (ಅರ್ಥಬದ್ಧವಲ್ಲದ ಪದಗಳನ್ನು ಹೊಂದಿದ ) ಗಳನ್ನೋ ಹಾಡುತ್ತಾರೆ, ಎನ್ನುತ್ತಾನೆ. ಭೋಜನು ತನ್ನ ಶೃಂಗಾರಪ್ರಕಾಶದಲ್ಲಿ ನಾಟ್ಯಶಾಸ್ತ್ರದ ವಿವರಣೆಯನ್ನೇ ಹೇಳಿದರೂ ತಂತೀವಾದ್ಯದ ಬದಲಾಗಿ ಭಾಂಡವಾದ್ಯವನ್ನು ಹೇಳಿ ಮಲಯವತಿಯ ಉದಾಹರಣೆಯನ್ನೇ ನೀಡಿದ್ದಾನೆ. ಶಾರದಾತನಯನು ಗೇಯಪದವು ಆಕರ್ಷಕವಾದ ಗೀತವನ್ನು ಆಸನದಲ್ಲಿ ಆಸೀನಳಾದ ನಾಯಿಕೆಯು ವೀಣೆಯನ್ನು ನುಡಿಸುತ್ತ ಅಭಿನಯಿಸುತ್ತಾಳೆ ಎಂದಿದ್ದಾನೆ. ಸಾಗರನಂದಿಯು ತನ್ನ ನಾಟಕಲಕ್ಷಣರತ್ನಕೋಶದಲ್ಲಿ , ನಾಯಕಿಯು ಆಸನದಲ್ಲಿ ಕುಳಿತು ವೀಣೆ ಹಾಗೂ ಲಯವಾದ್ಯಗಳ ವೃಂದಗಳೊಡನೆ ಗಾಯನ ಮಾಡುತ್ತಾಳೆಂದು ಉಲ್ಲೇಖಿಸಿ ಭೋಜನ ಉದಾಹರಣೆಗಳನ್ನೇ ನೀಡುತ್ತಾನೆ. ಕುಂಭನು ಸಂಗೀತರಾಜದಲ್ಲಿ ಇದನ್ನು ಶೇಷಪದವೆಂದಿದ್ದು, ಸಂಗೀತಗಾರರು ಸುಖಾಸೀನರಾಗಿ ಕುಳಿತು ವಾದ್ಯವೃಂದದೊಂದಿಗೆ ಸರಾಗವಾಗಿ ಹಾಡುತ್ತಾರೆ, ಎಂದಿದ್ದಾನೆ. ಶುಭಂಕರನು ಸಂಗೀತದಾಮೋದರದಲ್ಲಿ ಇದು ವಾದ್ಯವೃಂದವು ಅನುಸರಿಸುವ ಸ್ತ್ರೀಯೊಬ್ಬಳ ಗಾನವೆಂದು ಹೇಳುತ್ತಾನೆ.

1..ಶುಷ್ಕ —ವಾದ್ಯಗೋಷ್ಠಿಗಳಿಗೆ ಶುಷ್ಕವೃಂದವೆಂದು ಶಾಸ್ತ್ರೀಯ ಪರಿಭಾಷೆ. ಇದನ್ನು ಈ ಅರ್ಥದಲ್ಲಿಯೇ ಕನ್ನಡದ ಕವಿಗಳೂ ಹೇಳಿದ್ದಾರೆ.

2..ತಂತ್ರೀ — ವೀಣೆ ಇತ್ಯಾದಿ ತಂತಿವಾದ್ಯಗಳು.

3..ಆತೋದ್ಯ— ಆತೋದ್ಯವೆಂದರೆ ಸಂಗೀತವಾದ್ಯ. ಆ + 'ತುದ್' (ಹೊಡೆ, ನುಡಿಸು) ಎಂಬ ಧಾತುವಿನಿಂದ ಈ ಶಬ್ದವು ನಿಷ್ಪನ್ನವಾಗಿದೆ. ಆತೋದ್ಯ ಎಂಬ ಸಂಸ್ಕೃತ ಶಬ್ದವು ಆಉಜ್ಜ ಎಂಬ ಪ್ರಾಕೃತ ರೂಪವನ್ನು ಪಡೆದು ಆವಜ ಎಂಬ ದೇಶ್ಯಭಾಷಾಶಬ್ದವಾಗಿ ಉಳಿದುಕೊಂಡಿದೆ. ಆದರೂ ಇದು ಸಂಗೀತವಾದ್ಯವೆಂಬ ತನ್ನ ಸಾಮಾನ್ಯಾರ್ಥವನ್ನು ಕಳೆದುಕೊಂಡು ಅವನದ್ಧವಾದ್ಯ ವಿಶೇಷದ ಅರ್ಥದಲ್ಲಿ ಪ್ರಯುಕ್ತವಾಗಲು ಹದಿಮೂರನೆಯ ಶತಮಾನದಿಂದಲೇ ತೊಡಗಿತು. ಮೃದಂಗವನ್ನು ಹೋಲುವ ಚರ್ಮವಾದ್ಯಗಳಿಗೆ ಆವುಜಗಳೆಂಬ ಹೆಸರಿದ್ದಿತು. ಶಾರ್ಙ್ಗದೇವನು ಸಂಗೀತರತ್ನಾಕರದಲ್ಲಿ ದೇಶೀಪಟಹವನ್ನು ಜನರು ಅಡ್ಡಾವುಜವೆನ್ನುತ್ತಿದ್ದರೆಂದೂ ಹುಡುಕ್ಕಾ ವಾದ್ಯವನ್ನು ಲಕ್ಷ್ಯಜ್ಞರು ಆವಜ, ಸ್ಕಂಧಾವಜ (<ಕಂದಾವಜ)ವೆಂದು ಕರೆಯುತ್ತಿದ್ದರೆಂದೂ ತಿಳಿಸುತ್ತಾನೆ. ಸುಧಾಕಲಶನು ತನ್ನ ಸಂಗೀತೋಪನಿಷತ್ಸಾರೋದ್ಧಾರದಲ್ಲಿ (ಕ್ರಿ. ಶ. 1340)ಅವನದ್ಧವಾದ್ಯಗಳು ಲೋಕಭಾಷೆಯಲ್ಲಿ ಸ್ವಸ್ವನಾಮಾನುಸಾರವಾಗಿ ಎಂದರೆ ಅನ್ವರ್ಥವಾಗಿ ಆಉಜ, ಖಂದಾಉಜ, ಪಖಾವುಜ, ಪಟ್ಟಾವುಜ ಎಂದು ಬಳಕೆಯಲ್ಲಿದ್ದವು ಎಂದು ತಿಳಿಸುತ್ತಾನೆ.

## ಸ್ಥಿತಪಾಠ್ಯ

*ಆಸನಸ್ಥಾವದೇದ್ಯತ್ರ ಪ್ರಾಕೃತಂ ವಿರಹೇವಧೂಃ

Copyright protected

ಮನ್ಮಥಾನಲತಪ್ತಾಂಗೀ ಸ್ಥಿತಪಾಠ್ಯಂ ತದುಚ್ಯತೇ* ||೬೧||

ವಿರಹದಲ್ಲಿ ಸ್ತ್ರೀ, ಕಾಮಗ್ನಿಯಿಂದ ದೇಹವು ತಾಪಗೊಳ್ಳಲು, ಆಸನದಲ್ಲಿದ್ದು ಪ್ರಾಕೃತಭಾಷೆಯಲ್ಲಿ ವಿಹರಿಸುವುದು ಸ್ಥಿತಪಾಠ್ಯ.
ಭರತನು ಇದನ್ನು ಪಂಚಪಾಣಿ ತಾಲದಲ್ಲಿ ಒಂದು ಇಲ್ಲವೆ ಎರಡು ವೃತ್ತಗಳನ್ನು (ಪರಿವರ್ತ) ಗಳನ್ನು ಹಾಡಿ, ನಂತರ ಎರಡು ಕಲಾಗಳ ಚಂಚತ್ಪುಟ ತಾಲದಲ್ಲಿ ಎರಡು ಖಂಜಕಗಳನ್ನು ಹಾಡಬೇಕು. ಖಂಜಕಗಳನ್ನು ಯಥಾಕ್ಷರ ತಾಲದಲ್ಲಿ ಎಂಟು ಸನ್ನಿಪಾತಗಳೊಡನೆ ಹಾಡಿ ಎರಡು ಕಲಾಗಳ ದ್ರುತಲಯದ ಚಂಚತ್ಪುಟ ತಾಲದಲ್ಲಿ ಮುಕ್ತಾಯಗೊಳಿಸಬೇಕು, ಭೌಮ್ಯಚಾರೀಗಳನ್ನು ಬಳಸಬೇಕು, ಕುಣಿಯುವಾಗ, ವಾದ್ಯವನ್ನು ನುಡಿಸುವಾಗ ಮತ್ತು ಗೀತದ ಪ್ರಾರಂಭ ಮತ್ತು ಅಂತ್ಯದಲ್ಲಿ ಈ ಭೌಮ್ಯಚಾರೀಗಳನ್ನು ಪ್ರಯೋಗಿಸಬೇಕು ಎಂಬ ವಿವರಗಳನ್ನು ನೀಡುತ್ತಾನೆ.

ಸಾಹಿತ್ಯದರ್ಪಣವು ಸ್ಥಿತಪಾಠ್ಯಕ್ಕೆ ಕಾಮಾಗ್ನಿಯಿಂದ ತಾಪಗೊಂಡ ಸ್ತ್ರೀಯು ನಿಂತು (ಸ್ಥಿತ) ಪ್ರಾಕೃತವನ್ನು ರಸಭಾವಪೂರ್ಣವಾಗಿ ವಾಚಿಸುವುದು (ಪಾಠ್ಯ) ಎಂಬ ವಿವರಣೆಯನ್ನು ನೀಡಿದೆ. ಅಭಿನವಗುಪ್ತನು ಲಾಸ್ಯಕ್ಕೂ ವಾಚಿಕವು ಇದೆಯೆಂದು ಹೇಳಿ, ಮೂಲದಲ್ಲಿ ಇದನ್ನು ಸಂಕ್ಷಿಪ್ತವಾಗಿ ಸ್ತ್ರೀಗೆಂದು ನೀಡಿದೆಯೆಂದೂ, ಯಾವ ಮಾತಿನ ಶೈಲಿಯ ಉಕ್ತಿಯು ಕೋಪೋದ್ರಿಕ್ತವಾಗಿ ರೊಚ್ಚಿಗೆದ್ದು ಪ್ರಾಕೃತದಲ್ಲಿ ಇರುತ್ತದೋ ಅದು ಸ್ಥಿತಪಾಠ್ಯವೆಂದೂ, ಇದು ಮುಖ್ಯವಾಗಿ ದೊರೆ ಅಥವಾ ಆರಾಧಿಸುವ ದೈವದ ಸಂಪ್ರೀತಿಗಾಗಿಯೂ ಇರುವುದೆಂದೂ ಹೇಳುತ್ತಾನೆ. ಈ ಲಾಸ್ಯಾಂಗಕ್ಕೆ ಪಂಚಪಾಣಿ ತಾಲ ಅಥವಾ ಚಂಚತ್ಪುಟ ತಾಲವು ಕಲಾಗಳಲ್ಲಿ ಇರುತ್ತೇವೆಂದೂ ಹೇಳಿ ಹರ್ಷನ ರತ್ನಾವಳಿಯ ಎರಡನೆಯ ಪ್ರಕರಣವನ್ನು ಉದಾಹರಿಸಿದ್ದಾನೆ. ಭೋಜನು 'ಕಾಮಾಗ್ನಿಯಿಂದ ತಪ್ತಳಾದ ಸ್ತ್ರೀಯು ಆಸೀನಳಾಗಿ ತನಗೆ ಪ್ರತಿಸ್ಪರ್ಧಿಯಿರುವ ಭಾವದಿಂದ ಹಾಡುವುದೆಂದು' ಹೇಳಿದ್ದಾನೆ. ಶಾರದಾತನಯನು ನಾಯಕಿಯು ಭೂಮಿ ಚಾರಿಗಳನ್ನು ಚಂಚತ್ಪುಟ ತಾಲದಲ್ಲಿ ಮಾಡುತ್ತ ವಾಕ್ಯಗಳಿಗೆ ಅಭಿನಯಿಸುವುದೆಂದು ಉಲ್ಲೇಖಿಸಿದ್ದಾನೆ. ಸಾಗರನಂದಿಯು ಇದನ್ನೇ ಹೇಳುವುದರೊಂದಿಗೆ ಚರ್ಚರಿಯನ್ನು ಗಾಯನ - ನರ್ತನಗಳನ್ನು ಮಾಡಬೇಕು ಎಂಬ ಅಧಿಕೋಕ್ತಿಯನ್ನು ಹೇಳಿ ಮೃಚ್ಛಕಟಿಕದ ಐದನೆಯ ಅಂಕದ ವಸಂತಸೇನೆಯ 'ಭವ ಕಿಂ' ಆರಂಭಗೊಂಡ ವಾಕ್ಯ, ಮುಂತಾದುವನ್ನು ಉದಾಹರಿಸುತ್ತಾನೆ. ರಾಣಾಕುಂಭನು ಭೋಜನು ಹೇಳಿದ ಲಕ್ಷಣಗಳನ್ನೇ ಹೇಳಿ ಐದು ಪ್ರಾಕೃತ ವೃತ್ತಗಳನ್ನು ಉದಾಹರಣೆಯಾಗಿ ನೀಡುತ್ತಾನೆ. ಶುಭಂಕರನು ನಾಯಿಕಾಳಿಂದ ಇದು ಚಚ್ಚತ್ಪುಟ ತಾಳ ಸಹಿತವಾಗಿ ವಾಚಿಸಲ್ಪಟ್ಟು ಚಾರೀಗಳಿಂದ ಪ್ರಯುಕ್ತವಾಗುತ್ತದೆಯೆಂದು ಹೇಳುತ್ತಾನೆ.

---

# ಆಸೀನ

ಚಿಂತಾಶೋಗಿನ್ವಿತಂ ಸರ್ವೈಃ ವಾದ್ಯೈರಭಿನಯ್ವರಪಿ
ಹೀನಂ ಯತ್ರಾಸ್ಯತೇ ತಸ್ಮಾತ್ (ತತ್ಸ್ಯಾತ್) ಖ್ಯಾತಮಾಸೀನಸಂಜ್ಞಯಾ ||೬೨||

ಯಾವುದೇ ವಾದ್ಯಗಳು, ಅಭಿನಯಗಳಿಲ್ಲದೆ ಚಿಂತಾಶೋಕಗಳಿಂದ ಕುಳಿತಿರುವುದಕ್ಕೆ ಆಸೀನವೆಂದು ಹೆಸರು.

Copyright Protected

ಭರತನು ಆಸೀತಪಾಠ್ಯವನ್ನು, ಸ್ತ್ರೀಪಾತ್ರವು ಕುಳಿತಲ್ಲಿಂದಲೇ ದಕ್ಷತೆಯಿಂದ ಪ್ರಯೋಗಿಸಬೇಕೆಂದೂ, ಪುರುಷನಿಗೆ ಸಂಬಂಧಿಸಿದ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ದೀರ್ಘಪಾದಗಳ ವೃತ್ತಗಳಲ್ಲಿ, ತ್ರ್ಯಸ್ರತಾಲದಲ್ಲಿ ಆಸೀನಪಾಠ್ಯವನ್ನು ಹಾಡಬೇಕು, ನಾಲ್ಕು ಪಾದಗಳ ಅರ್ಥವನ್ನು ಅಭಿನಯಿಸುತ್ತ ಪಂಚಪಾಣಿ ತಾಲದಲ್ಲಿ ಆಸೀನಪಾಠ್ಯವನ್ನು ಪ್ರಯೋಗಿಸಬೇಕು, ಈ ಆಸೀನಪಾಠ್ಯದಲ್ಲಿ ಯಥಾಕ್ಷರ ಪಂಚಪಾಣಿ ತಾಲದಲ್ಲಿ, ಎಂಟು ಸನ್ನಿಪಾತಗಳನ್ನೂ ತಾಲಗಳನ್ನೂ ಒಳಗೊಂಡ ಶೀರ್ಷಿಕವನ್ನು ಬಳಸಬೇಕು, ಎರಡನೆಯಪರಿವರ್ತದಲ್ಲಿ ಎಂಟನೆಯ ಸನ್ನಿಪಾತವು ಮುಗಿದ ಮೇಲೆ ಚತುರಸ್ರ ತಾಲದಲ್ಲಿ ಒಂದು ಶ್ಲೋಕವನ್ನು ಹಾಡಬೇಕು, ಈ ಲಾಸ್ಯಾಂಗದ ಪ್ರಕಾರದಲ್ಲಿ ವಾದ್ಯಗಳ ಪ್ರಯೋಗವು ಅದರ ಅಂಗಗಳಿಗೆ ಹೊಂದುವಂತಹದಾಗಿರಬೇಕು, ಕೊನೆಗೆ ಹನ್ನೆರಡು ಇಲ್ಲವೆ ಹದಿನೆಂಟು ಪದಗಳನ್ನು ಹಾಡಿ ಉತ್ತರಕಾಲದಲ್ಲಿ ನಿರ್ವಹಣವನ್ನು ಪ್ರಯೋಗಿಸಬೇಕು ಎಂಬ ಲಕ್ಷಣಗಳನ್ನು ಹೇಳುತ್ತಾನೆ. ಸ್ತ್ರೀಯೊಬ್ಬಳು ಆಭರಣರಹಿತಳಾಗಿ ದುಃಖಾತಂಕಗಳಿಂದ ಕೂಡಿದವಳಾಗಿ ಯಾವ ಸಂಗೀತವಾದ್ಯಗಳ ನುಡಿಸಾಣಿಕೆ ಇಲ್ಲದೆ ಕುಳಿತಿರುತಿದ್ದರೆ ಅದು ಆಸೀನವೆಂದು ಸಾಹಿತ್ಯದರ್ಪಣವು ಹೇಳುತ್ತದೆ. ಅಭಿನವಗುಪ್ತನು ಪಾತ್ರವು ದುಃಖಾತಿಶಯದಿಂದ ಅಭಿನಯರಹಿತವಾಗಿ, ವಾದ್ಯವೃಂದದ ಬಾಜನೆಯೂ ಇಲ್ಲದೆ ಕುಳಿತಿರುವುದೆಂದೂ ಗಾಯನಿಯರು ದೈನ್ಯ, ದುಃಖಗಳನ್ನು ಪ್ರಮುಖವಾಗಿ ತೋರುವ ಕೆಳಮಲಗಿದ, ದೃಷ್ಟಿಯನ್ನು ಕೆಳಹಾಕಿದ, ಅಂತರ್ಮುಖಿಯಾದ ಸಂದರ್ಭಗಳಲ್ಲಿ, ಮುಂತಾದ ಮನಕ್ಕೆ ಪರಿಣಾಮವನ್ನುಂಟುಮಾಡುವ ಕಾಕಲಿ ಸ್ವರಗಳನ್ನು ಮೆಲ್ಲಗೆ ಕೋಮಲವಾಗಿ, ನವುರಾಗಿ ಹಾಡುತ್ತಿರುತ್ತಾರೆಂದೂ ಉಲ್ಲೇಖಿಸುತ್ತಾನೆ. ನಾನ್ಯದೇವನು ವಿದೇಶಕ್ಕೆ ಹೋದ ತನ್ನ ಪ್ರಿಯತಮನ ನೂರಾರು ಗುಣವಿಶೇಷಗಳ ಬಗ್ಗೆ ನಾಯಿಕಾಳು ಆಲೋಚಿಸುತ್ತಾಳೆಂದು ಹೇಳಿದರೆ ಭೋಜನು ಇದೇ ಲಕ್ಷಣಗಳನ್ನು ಹೇಳಿ ರತ್ನಾವಳಿ ನಾಟಕದ ಮೂರನೆಯ ಅಂಕದ ಸಾಲುಗಳನ್ನು ಉದಾಹರಿಸುತ್ತಾನೆ. ಶಾರದಾತನಯನು ಈ ಲಾಸ್ಯಾಂಗವನ್ನು ಭರತನಂತೆಯೆ ಆಸೀನಪಾಠ್ಯವೆಂದು ಕರೆದು ಆಸೀನಳಾದ ಸ್ತ್ರೀಯು ಮಾಡುವ ಆಕರ್ಷಕವಾಗಿ ಕಣ್ರೆಪ್ಪೆಗಳು, ದೃಷ್ಟಿ ಮತ್ತು ಪಾದಗಳ ಚಲನೆಯಿಂದ ಕೂಡಿರುತ್ತದೆಂದು ಹೇಳಿ ರತ್ನಾವಳಿಯ ಎರಡನೆಯ ಅಂಕಣದಲ್ಲಿ ನಾಯಿಕೆಯು ವಾಚಿಸಿದ ವಾಕ್ಯಗಳನ್ನು ಉದಾಹರಿಸುತ್ತಾನೆ. ಸಾಗರನಂದಿಯು ಶಾರದಾತನಯನು ಹೇಳಿದ ಲಕ್ಷಣಗಳನ್ನೆ ಹೇಳುತ್ತಾನೆ. ಕುಂಭಕರ್ಣನು ವಿಶಿಷ್ಟವಾಗಿ 'ಖಂಡಿತಾ ನಾಯಿಕೆಯು ಚಿಂತಾಕ್ರಾಂತಳಾಗಿ ದುಃಖಾತಿಶಯದಿಂದ ಆಂಗಿಕವಾಗಿಯೂ ವಾಚಿಕವಾಗಿಯೂ ಗೊಂದಲಕ್ಕೊಳಗಾಗುವಂತೆ ಈ ಲಾಸ್ಯಾಂಗದ ಲಕ್ಷಣವನ್ನು ಹೇಳಿ ಎರಡು ಸಂಸ್ಕೃತ ಶ್ಲೋಕಗಳು ಉದಾಹರಣೆಗಳನ್ನು ನೀಡಿದ್ದಾನೆ.

---

## ಪುಷ್ಪಗಂಡಿಕಾ

ನೃತ್ತಂ ಗೀತಂಚ ವಾದ್ಯಂಚ ಯತ್ರ ನಾನಾವಿಧಂ ಭವೇತ್
ಪುಂವಚ್ಚ ವಿವಿಧಾಶ್ಚೇಷ್ಟಾಃ ನಾರ್ಯಾಸ್ಯಾಪುಷ್ಪಗಂಡಿಕಾ ||೬೩||

ನಾನಾವಿಧದ ನೃತ್ತಗೀತವಾದ್ಯಗಳೊಂದಿಗೆ ಗಂಡಸಿನಂತೆಯೇ ಹೆಂಗಸು ವಿವಿಧ ಚೇಷ್ಟೆಗಳನ್ನು ಮಾಡುವುದು ಪುಷ್ಪಗಂಡಿಕಾ.

Copyright protected

ಭರತನು ಪುಷ್ಪಗಂಡಿಕಾ ಲಾಸ್ಯಪ್ರಕಾರವು ಅನೇಕ ವೃತ್ತಗಳಿಂದ ಕೂಡಿದೆಯೆಂದೂ ಇದರಲ್ಲಿ ಹಾಡು ಮತ್ತು ವಾದ್ಯ - ಇವು ಒಂದಾದ ನಂತರ ಮತ್ತೊಂದರಂತೆ ಪ್ರಯೋಗಿಸಲ್ಪಡುವುದೆಂದೂ ಹಾಡಿನ ಪ್ರತಿಯೊಂದು ಪಾದದ ಜೊತೆಗೆ, ವಾದ್ಯಗಳನ್ನು ನುಡಿಸುತ್ತಿರುವಾಗ ಸೂಕ್ತ ಅಂಗಹಾರಗಳಿರಬೇಕು, ಸಂವೃತ್ತ ಪ್ರಕಾರದ ಪುರುಷವೃತ್ತವನ್ನು ಬಳಸಬೇಕು. ಪ್ರತಿಯೊಂದು ಪಾದವನ್ನು ಹಾಡುವಾಗ ಸೂಕ್ತ ನೃತ್ತವಿರಬೇಕು. ನಾಲ್ಕು ಸನ್ನಿಪಾತಗಳ ಚಂಚತ್ಪುಟ ತಾಲದಲ್ಲಿ ವಾದ್ಯಗಳನ್ನು ನುಡಿಸಬೇಕು. ಆಮೇಲೆ ಖಂಜಿನಟ್ಕುಟ ವೃತ್ತಗಳಲ್ಲಿ ಎರಡು ಶ್ಲೋಕಗಳನ್ನು ಹಾಡಬೇಕು. ನಿರ್ವಹಣದ ಅಂತ್ಯದಲ್ಲಿ ಪಂಚಪಾಣಿ ತಾಲದಲ್ಲಿ ಶೀರ್ಷಿಕವಿರಬೇಕು. ನೃತ್ತದಲ್ಲಿ ಆವಿದ್ಧ ಚಾರೀ ಮತ್ತು ಅರ್ಥಸೂಚಕ ಅಂಗಹಾರಗಳನ್ನು ಬಳಸಬೇಕು ಎಂಬ ಲಕ್ಷಣಗಳನ್ನು ಹೇಳುತ್ತಾನೆ. ಪ್ರಬಂಧದಲ್ಲಿ ವೃತ್ತಗಳ ವೈವಿಧ್ಯವಿದ್ದು, ಗೀತಗಳು ಸಂಗೀತವೃಂದ ಸಮೇತವಾಗಿದ್ದು ನಾಯಕ - ನಾಯಿಕಾಗಳು ಅವರ ಸ್ವಭಾವಗಳ ವಿರುದ್ಧವಾಗಿ ಅಭಿನಯಿಸುವುದು ಪುಷ್ಪಗಂಡಿಕಾ ಎಂದು ಕವಿ ವಿಶ್ವನಾಥನು ಹೇಳುತ್ತಾನೆ. ಅಭಿನವಗುಪ್ತನು ಈ ಲಾಸ್ಯಾಂಗಕ್ಕೆ ಪ್ರಯುಕ್ತವಾಗುವ ಗಾಯನ, ನರ್ತನ, ಪ್ರಬಂಧಗಳು ಪುಷ್ಪಹಾರವನ್ನೇ ಹೋಲುವುದರಿಂದ ಈ ಹೆಸರನ್ನು ಹೊಂದಿದೆ. ಎನ್ನುತ್ತಾನೆ. ಬರೋಡಾ ಆವೃತ್ತಿಯ 127 ನೆಯ ಶ್ಲೋಕವು ನಾಯಕಿಯು ತನ್ನ ಸ್ನೇಹಿತರ ವಿನೋದಕ್ಕಾಗಿ ಪುರುಷ ವೇಷ ಧರಿಸಿ ಸಂಸ್ಕೃತದ ಆಕರ್ಷಕ ವಚನಗಳನ್ನು ನುಡಿಯುತ್ತಾರೆ, ಎಂದು ಹೇಳಿದೆ. ಇದರಲ್ಲಿ ಪುಷ್ಪಗಣಿಕಾ ಎಂಬ ಹೆಸರನ್ನು ಹೇಳಿದೆ. ನಾನ್ಯದೇವನು ನಾಟ್ಯಶಾಸ್ತ್ರದ ಲಕ್ಷಣವನ್ನೆ ಹೇಳಿ ಇದನ್ನು ಪುಷ್ಪಗಂಧವೆನ್ನುತ್ತಾನೆ. ಭೋಜನೂ ನಾನ್ಯದೇವನಂತೆಯೆ ನಾಟ್ಯಶಾಸ್ತ್ರದ 126 ಶ್ಲೋಕದ ಲಕ್ಷಣವನ್ನು ಹೇಳಿ ರತ್ನಾವಳಿ ನಾಟಕದ ಎರಡನೆಯ ಅಂಕದ ಎರಡು ಶ್ಲೋಕಗಳನ್ನು ಉದಾಹರಿಸುತ್ತಾನೆ. ಶಾರದಾತನಯನ ಉಲ್ಲೇಖದಂತೆ ಈ ಲಾಸ್ಯಾಂಗದಲ್ಲಿ ಅನೇಕ ವಾದ್ಯಗಳನ್ನು ಉಳ್ಳ ವೃಂದವು ಅನೇಕ ತಾಳಗಳನ್ನು ಪ್ರಯೋಗಿಸಲ್ಪಡುತ್ತದೆ. ಸಾಗರನಂದಿಯು ಈ ಲಾಸ್ಯಾಂಗವು ವಾದ್ಯವೃಂದದೊಡಗಿನ ಗಾಯನವು ತಾಲ-ಲಯದಿಂದೊಡಗೂಡಿದ್ದು, ಇದರ ಉದ್ದೇಶವು ಪ್ರಿಯಕರನ ಇಂಗಿತವನ್ನು ಕಂಡುಹಿಡಿಯುವುದೆ ಆಗಿದೆಯೆನ್ನುತ್ತಾನೆ. ಕುಂಭಕರ್ಣನು ಈ ಲಾಸ್ಯಾಂಗವನ್ನು ಪುಷ್ಪಮಂಡಿಕಾ ಎಂದು ಕರೆದಿದ್ದು, ಇದರಲ್ಲಿ ನರ್ತಕಿಯರ ನರ್ತನವು ಅನೇಕ ಗೀತಗಳಿಗೆ ವಾಚಿಕ, ಆಂಗಿಕಾಭಿನಯಗಳಿಲ್ಲದೆ ಇರುತ್ತದೆಂದಿದ್ದಾನೆ. ಶುಭಂಕರನು ಈ ಲಾಸ್ಯಾಂಗವು ಸುಂದರವಾಗಿದ್ದು ಅನೇಕ ತಾಳ ಕಲಾಗಳಿಂದ ಕೂಡಿದೆಯೆಂದು ಸರಳವಾಗಿ ಹೇಳುತ್ತಾನೆ. ಕೆಲವು ಹಸ್ತಪ್ರತಿಗಳಲ್ಲಿ ಪುಷ್ಪಗಂಧಿಕಾ ಎಂಬ ಹೆಸರೂ ಇದೆ.

Copyright protected

1..ನೃತ್ತ — ಭರತನು ನೃತ್ತ - ನೃತ್ಯಗಳನ್ನು ಸಮಾನವಾಚಕಗಳೆಂದೆ ಎಣಿಸಿದ್ದಾನೆ. ನೃತ್ತಕ್ಕೆ ವಾಗರ್ಥವು ಬೇಕಾಗಿಲ್ಲ, ಶೋಭೆಯನ್ನು ಅಂಗವಿಕ್ಷೇಪದಿಂದ ಮಾತ್ರ ಅದು ಹುಟ್ಟಿಸುತ್ತದೆ ಎಂಬ ಸ್ಪಷ್ಟಾರ್ಥವನ್ನೆ ಹೇಳುತ್ತಾನೆ. ಅಭಿನವಗುಪ್ತನು ನಾಟ್ಯಶಾಸ್ತ್ರದ ವ್ಯಾಖ್ಯಾನದಲ್ಲಿ ನರ್ತನವೆಂದರೆ ವಾಗಾರ್ಥ ಅಭಿನಯ, ನೃತ್ತವೆಂದರೆ ಗಾತ್ರವಿಕ್ಷೇಪದಿಂದ ಮಾತ್ರ, ಎಂದರೆ ಅಂಗಪ್ರತ್ಯಂಗಗಳ ವಿಲಾಸಪೂರ್ವಕವಾದ ಅಭಿನಯ - ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಧನಂಜಯನು ತಾಲಲಯಗಳನ್ನು ಆಶ್ರಯಿಸಿದ್ದು ನೃತ್ತ, ಚಂಚತ್ಪುಟ ಮುಂತಾದುವು ತಾಳಗಳು, ದ್ರುತ ಮುಂತಾದುವು ಲಯಗಳು. ಅಭಿನಯಶೂನ್ಯವಾಗಿ ಕೇವಲ ತಾಲಲಯಗಳನ್ನು ಆಶ್ರಯಿಸಿದ ಅಂಗವಿಕ್ಷೇಪವೇ ನೃತ್ತ. ಇದು ನೃತ್ಯ ನಾಟ್ಯಗಳಿಗಿಂತ

ಬೇರೆಯಾಗಿದೆ. ನೃತ್ಯವು ಪದಾರ್ಥಾಭಿನಯವನ್ನುಳ್ಳದ್ದು. ಅದು ಶಾಸ್ತ್ರೀಯ ಪರಂಪರೆಯನ್ನುಳ್ಳದ್ದು. ಅದಕ್ಕೆ 'ಮಾರ್ಗ'ವೆಂದು ಹೆಸರು. ಅಭಿನಯಶೂನ್ಯವಾದದ್ದು 'ದೇಶೀ'. ಇದರಲ್ಲಿ ಅಂಗವಿಕ್ಷೇಪಕ್ಕೇ ಪ್ರಾಧಾನ್ಯವಿದೆಯೆನ್ನುತ್ತಾನೆ. ನಂದಿಕೇಶ್ವರನು ನೃತ್ತವನ್ನು 'ಭಾವಾಭಿನಯಹೀನಂ ತು ನೃತ್ತಮಿತ್ಯಭಿಧೀಯತೇ' ಎಂದೂ ನೃತ್ಯವನ್ನು 'ರಸಭಾವ್ಯಂಜನಾದಿಯುಕ್ತಂ ನೃತ್ಯಮಿತೀರ್ಯತೇ' ಎಂದೂ ವರ್ಣಿಸುತ್ತಾನೆ. ಅರ್ವಾಚೀನರು ನೃತ್ತ ನೃತ್ಯಗಳಿಗೆ ಹೇಳುವ ಭಿನ್ನತೆಯ ಮೂಲವು ಇಲ್ಲಿದೆ. ನೃತ್ತದಲ್ಲಿ ಭಾವದ ಅಭಿನಯವಿಲ್ಲ. ನೃತ್ಯದಲ್ಲಿ ರಸಭಾವಗಳೆರಡರ ಅಭಿನಯವೂ ಉಂಟು. ಆದರೆ ಅವನು ತನ್ನ ಅಭಿನಯದರ್ಪಣದಲ್ಲಿ ನೃತ್ತ, ನೃತ್ಯ, ನಾಟ್ಯ ಶಬ್ದಗಳಿಗೆ ಮೇಲೆ ಹೇಳಿದ ವ್ಯತ್ಯಾಸಗಳನ್ನೇ ಯಾವಾಗಲೂ ತಪ್ಪದೆ ವಿವಕ್ಷಿಸುತ್ತಾನೆಂದು ಹೇಳುವಂತಿಲ್ಲ. ಏಕೆಂದರೆ ಸಾಹಿತ್ಯಭಾವ (ವಾಚಿಕ) ಮತ್ತು ರಸ(ಸಾತ್ವಿಕ)ಗಳ ಅಭಿನಯ ಸಂದರ್ಭವು ಬೇರೆ ಬೇರೆ ಬಂದಾಗಲೂ ನಾಟ್ಯಶಾಸ್ತ್ರ ವಿಶಾರದೈಃ, ನಾಟ್ಯಕೋವಿದೈಃ, ನಾಟ್ಯಕಲಾಭಿಜ್ಞೈಃ, ನಾಟ್ಯ ತಂತ್ರ ವಿಚಾರಜ್ಞೈಃ, ನಾಟ್ಯವಿದಃ, ನಾಟ್ಯಶಾಸ್ತ್ರಾರ್ಥಕೋವಿದೈಃ, ನಾಟ್ಯವಿದ್ಯಾಧಿಪೈಃ,ಎಂಬ ಮಾತುಗಳನ್ನೂ ಪೂರ್ವಕಥೆಯ ವಿವಕ್ಷೆಯಿಲ್ಲದಿರುವಾಗಲೂ ನೃತ್ಯಕೋವಿದೈಃ, ನೃತ್ಯಶಾಸ್ತ್ರವಿಶಾರದೈಃ. ಎಂಬವುಗಳನ್ನು ಕೇವಲ ಗಾತ್ರವಿಕ್ಷೇಪ ಮಾತ್ರಾರ್ಥದಲ್ಲಿಯೂ ಅವನು ಹೇಳುತ್ತಾನೆ. ವಿವಸ್ವಂತನು ತನ್ನ ಯೋಗಮಾಲಾ ಸಂಹಿತೆಯಲ್ಲಿ ಶಿವಪ್ರಣೀತವೆನ್ನುವ ತಾಂಡವ, ಲಾಸ್ಯ, ನಾಟ್ಯ, ನೃತ್ತ, ನರ್ತನವೆಂಬವುಗಳನ್ನು ಶಾರದಾತನಯನು ಪೃಥಕ್ಕರಿಸಿ ಲಕ್ಷಿಸಿದ್ದಾನೆ. ನೃತ್ತವಾದರೋ ಕರಣ ಮತ್ತು ಅಂಗಹಾರಗಳಿಂದ ಕೂಡಿದ ಎಂದರೆ ಆಂಗಿಕವಾದ ಮಾತ್ರ ಅಭಿನಯ, ಹಾಡು, ಬಾಜನೆ, ಮಾತು ಇವು ಯಾವುವೂ ಇಲ್ಲದ ಕುಣಿತ ಮಾತ್ರವಿದ್ದರೆ ನೃತ್ತವೆಂದು ಹೇಳುತ್ತಾನೆ. ಶಾರದಾತನಯನ ಪ್ರಕಾರದಂತೆ ನೃತ್ಯವು ಭಾವಾಶ್ರಯ, ನೃತ್ತವು ರಸಾಶ್ರಯ, ಶ್ರೀಗದಿತ, ತೋಟಕ ಮುಂತಾದವು ನೃತ್ಯ. ಪಾರ್ಶ್ವದೇವನು 'ನಾಟ್ಯೇ ಚ ನೃತ್ತೇ ಚ ನಿಯುದ್ಧೇ ಚ ಯಥೋಚಿತಮ್ | ನೃತ್ತಂ ಸ್ಯಾದ್ ಗಾತ್ರವಿಕ್ಷೇಪೋಽವಸ್ಥಾನುಕೃತಿಲಕ್ಷಣಃ' || ಎಂದು ವಿವರಿಸುತ್ತಾನೆ. ಸೋಮೇಶ್ವರನು ತನ್ನ ಮಾನಸೋಲ್ಲಾಸದಲ್ಲಿ ನೃತ್ಯ, ನೃತ್ತ, ನರ್ತನ ಶಬ್ದಗಳಿಗೆ ಅರ್ಥವನ್ನು ನೀಡುವುದಿಲ್ಲ. ಆದರೂ ನಾಟಕವನ್ನೂ ಒಳಗೊಂಡ ಸಂಗ್ರಹಾರ್ಥದಲ್ಲಿ ಒಳಗೊಳ್ಳುವಂತೆ ಸಂಗ್ರಹಾರ್ಥದಲ್ಲಿ ಒಳಗೊಳ್ಳುವಂತೆ ನರ್ತನ ಎಂಬುದನ್ನು ಲಕ್ಷಿಸಿದ್ದಾನೆ. ಶಾರ್ಙ್ಗದೇವನು ನೃತ್ತವೆಂದರೆ ಯಾವ ರೀತಿಯ ಅಭಿನಯವೂ ಇಲ್ಲದ, ಎಂದರೆ ವಾಗಾರ್ಥ ಸೂಚನೆಯೇ ಇಲ್ಲದೆ ಮಾಡಿದ ಅಂಗಪ್ರತ್ಯಂಗಗಳ ವಿಕ್ಷೇಪವೇ ನೃತ್ತವೆನ್ನಿಸುತ್ತದೆ, ಎಂಬ ನಿಷ್ಕೃಷ್ಟವೂ, ಸ್ಪಷ್ಟವೂ, ಅಸಂದಿಗ್ಧವೂ ಆಗಿರುವ ನಿರೂಪಣೆಯನ್ನು ಕೊಟ್ಟಿದ್ದಾನೆ. ವಾಗರ್ಥನಿಷ್ಠವಲ್ಲದೆ ಮತ್ತು ಇತರ ರೀತಿಯಲ್ಲಿ ವಸ್ತುನಿಷ್ಠವಲ್ಲದೆ ಕೇವಲ ಆಕೃತಿನಿಷ್ಠವಾದ ಕರಣ, ಅಂಗಹಾರ ಮೊದಲಾದವುಗಳಿಂದ ಹುಟ್ಟುವ ಸೌಂದರ್ಯಾರ್ಥಕ್ಕೆ ನೃತ್ತವೆಂದು ಹೆಸರು ಎಂಬುದು ಆತನ ಅಭಿಮತ. ಆಂಗಿಕಾಭಿನಯದಲ್ಲಿಯಾದರೂ ಅದರ ಅವಾಂತರ ಭೇದವಾದ ನೃತ್ತವನ್ನು ಶಾರ್ಙ್ಗದೇವನು 'ಕರಣೈರಂಗಹಾರೈಶ್ಚ ಸಾಧಿತಂ ನೃತ್ತಮುಚ್ಯತೇ' ಎಂದು ವರ್ಣಿಸಿದ್ದಾನೆ. ಈತನ ವ್ಯಾಖ್ಯಾನಕಾರರಾದ ಕಲ್ಲಿನಾಥ ಹಾಗೂ ಸಿಂಹಭೂಪಾಲರು ಇದೇ ಅರ್ಥವನ್ನು ವಿಸ್ತರಿಸುತ್ತಾರೆ. ಶಾರ್ಙ್ಗದೇವನು ಮುಂದುವರೆದು ನೃತ್ತವನ್ನು ವಿಕಟ, ವಿಷಮ, ಲಘು ಎಂಬ ಮೂರು ವಿಧಗಳಾಗಿ ವಿಂಗಡಿಸುತ್ತಾನೆ. ಪೂರ್ವಾಚಾರ್ಯರುಗಳಾದ ಸೋಮೇಶ್ವರ

Copyright protected

ಮೊದಲಾದವರು ನಾಟ್ಯದ ವಿವಿಧ ಪ್ರಕಾರಗಳನ್ನಾಗಿಯೇ ಇವುಗಳನ್ನು ಹೇಳಿದರೂ ಅವನು ಈ ಮೂವರನ್ನು ಹೆಚ್ಚು ವೈಜ್ಞಾನಿಕವಾಗಿ ನೃತ್ತ ಅವಾಂತರಭೇದಗಳನ್ನಾಗಿ ವರ್ಗೀಕರಿಸಿದ್ದಾನೆ. ಇದರಲ್ಲಿ ಲಘುವೆಂದರೆ ಅಂಚಿತವೇ ಮೊದಲಾದ ಕೇವಲ ಕೆಲವು ಕರಣಗಳಿಂದ ಕೂಡಿ ಸರಳವಾಗಿರುವ ನೃತ್ತ. ಇದಕ್ಕೆ, ಉತ್ಸವಾದಿಗಳಲ್ಲಿ ಹಳ್ಳಿಯ ಹೆಂಗಸರು ಕುಣಿಯುವುದು ಲಘುನೃತ್ತ ಎಂಬ ಟಿಪ್ಪಣಿಯನ್ನು ಸಿಂಹಭೂಪಾಲನು ಸೇರಿಸುತ್ತಾನೆ. ಕಲ್ಲಿನಾಥನು ಕ್ರಿಯಾವೈಚಿತ್ರ್ಯವಿಲ್ಲದುದರಿಂದ ಕೇವಲ ಸರಳವಾಗಿರುತ್ತದೆ, ಎನ್ನುತ್ತಾನೆ. ವಿಕಟನೃತ್ತವೆಂದರೆ ವೇಷಭೂಷಣಗಳಲ್ಲಿಯೂ ಅವಯವ ವಿನ್ಯಾಸದಲ್ಲಿ ವಿರೂಪವಾಗಿರುವ ಎಂದರೆ ಅಸಾಧಾರಣವೂ ವಿಕೃತವೂ ಆಗಿರುವ ನೃತ್ತ. ಸಿಂಹಭೂಪಾಲನು ಪೇರಣೀ ನೃತ್ತವು ಈ ಬಗೆಯದು ಎಂಬ ಉದಾಹರಣೆಯನ್ನು ಕೊಡುತ್ತಾನೆ. ದೊಂಬರಾಟ ಅಥವಾ ಗರಡಿ ಸಾಧನೆಗಳಲ್ಲಿ ಕಂಡುಬರುವಂತಹ ಕಷ್ಟಸಾಧ್ಯವೂ ವಿಚಿತ್ರವೂ ಆಗಿರುವ ಅಂಗಸಾಧನೆಗಳನ್ನು ಒಳಗೊಂಡ ನೃತ್ತಕ್ಕೆ ವಿಷಮವೆಂದು ಹೆಸರು. ನಾಟ್ಯ ಎಂಬುದು ಸ್ಥಿರವಾಗಿ ಆಡುಮಾತಿನಲ್ಲಿ ನೃತ್ತ, ನೃತ್ಯಾರ್ಥಗಳಲ್ಲಿ ನಿಂತುದು ಹದಿನೈದು, ಹದಿನಾರನೆಯ ಶತಮಾನಗಳಲ್ಲಿ. ಈ ಕಾಲದಲ್ಲಿ ಕರ್ನಾಟಕದಲ್ಲಿ ಭರತನಾಟ್ಯ ಎಂಬ ಶಬ್ದವು ಹೇಗೆ ಮೊದಲ ಬಾರಿಗೆ ಆಧುನಿಕಾರ್ಥದಲ್ಲಿ ಬಳಕೆಯಾಯಿತು ಎಂಬುದರ ಇತಿಹಾಸವನ್ನು ರಾ. ಸತ್ಯನಾರಾಯಣರವರು ತಮ್ಮ Bharathanatya ; A Critical Study ಎಂಬ ಪುಸ್ತಕದಲ್ಲಿ ವಿವೇಚಿಸಿದ್ದಾರೆ.

2..ಗೀತ — ರಂಜಕ ಸ್ವರಸಂದರ್ಭವೆಲ್ಲ ಗೀತ. ಅದು ಗಾಂಧರ್ವ, ಗಾನವೆಂದು ಎರಡು ವಿಧ. ಧಾತುಮಾತುಗಳು ಶಾಸ್ತ್ರೋಕ್ತ ಲಕ್ಷಣಗಳನ್ನೊಳಗೊಂಡು, ದೇಶೀರಾಗ ಮೊದಲಾದುವುಗಳಲ್ಲಿ ರಚಿತವಾದ ಹಾಡುಗಳು 'ಗಾನ'. ಗಾಂಧರ್ವವೆಂದರೆ ಅನಾದಿ ಸಂಪ್ರದಾಯದಿಂದ ಗಂಧರ್ವರು ಹಾಡುವ, ನಿಯತವಾದ ಶ್ರೇಯಸ್ಸನ್ನು ಕೊಡುವ ಹಾಡಿನ ವಿಧ. ಗಮಕಾಲಪ್ತಿ, ಧಾತು, ಅಂಗಗಳು ಇರುವ ಹಾಡುಗಳೇ ಪ್ರಬಂಧಗಳು. ಶುದ್ಧಗೀತಗಳು ಮಾತ್ರ ಪ್ರಬಂಧಗಳು.

3..ಚೇಷ್ಟಾ — ಆಹಾರ್ಯಾಭಿನಯವೆಂಬುದು ನೇಪಥ್ಯದಿಂದ ಹುಟ್ಟಿದ ವಿಧ. ನೇಪಥ್ಯದಲ್ಲಿ ಪುಸ್ತ, ಅಲಂಕಾರ, ಸಂಜೀವ, (=ಸಜೀವ, ಸಜ್ಜೀವ) ಅಂಗರಚನಾ ಎಂಬ ನಾಲ್ಕು ವಿಧಗಳಿವೆ. ಪುಸ್ತದಲ್ಲಿ ಸಂಧಿಮಾ, ಭಾಜಿಮಾ ಮತ್ತು ಚೇಷ್ಟಿಮಾ ಎಂಬ ಮೂರು ವಿಧಗಳು. ಶರೀರದ ಚೇಷ್ಟಾ ವ್ಯಾಪಾರದಿಂದ ಯಾವ ರೂಪವು ಆಗುತ್ತದೋ ಅದು ಚೇಷ್ಟಿಮಾ.

---

## ಪ್ರಚ್ಛೇದಕ

ಪ್ರಚ್ಛೇದಕೋ ಭವೇದ್ಯತ್ರ ಜ್ಯೋತ್ಸ್ನಾ ಸಂತಾಪವಿಹ್ವಲಾಃ
ಕಾಮಿನ್ಯೋಯಾಂತಿ ನಿರ್ವೀಲಾಃ ಸಾಪರಾಧಾನಪಿ ಪ್ರಿಯನ್ ||೬೪||

ಬೆಳುತಿಂಗಳಿನ ತಾಪವನ್ನು ತಡೆಯಲಾರದೆ ಕಾಮಿನಿಯರು ನಾಚಿಕೆಬಿಟ್ಟು, ತಪ್ಪು ಮಾಡಿದ ಪ್ರಿಯನಾದರೂ ಅವನ ಬೆನ್ನು ಹತ್ತುವುದು ಪ್ರಚ್ಛೇದಕ.

Copyright protected

ಭರತನು, ಪ್ರಚ್ಛೇದಕವೆಂಬ ಲಾಸ್ಯ ಪ್ರಕಾರಕ್ಕೆ ಮೂರು ಅಂಗಗಳೂ ಎರಡು ಧಾತುಗಳೂ ಇರುತ್ತವೆ ಎಂಬುದನ್ನು ಲಾಸ್ಯಪಟು ಅರಿತಿರಬೇಕು. ಬೆಳದಿಂಗಳಿನಲ್ಲಿ, ದೇವಸ್ಥಾನದಲ್ಲಿ (ಪಾಠಾಂತರದಲ್ಲಿ, ಮದಿರಾದಲ್ಲಿ), ಕನ್ನಡಿಯಲ್ಲಿ (ಇನ್ನೊಂದು ಪಾಠದಲ್ಲಿ- ಮತ್ತೂ ನೀರಿನಲ್ಲಿ ) ಪ್ರಣಯಿಯ ಮುಖದ ಪ್ರತಿಬಿಂಬವನ್ನು ನೋಡಿ ಹರ್ಷವಾದುದನ್ನು ಪ್ರಸನ್ನತೆಯ ಲೀಲಾ ಮುದ್ರೆಗಳಿಂದ, ಬೇರೆ ಬೇರೆ ಭಾವಗಳಿಂದ ನರ್ತಿಸಬೇಕು. ಇದನ್ನು ಎಂಟು ಸನ್ನಿಪಾತಗಳ ಸಮವೃತ್ತವನ್ನು ಚಂಚತ್ಪುಟ ತಾಲದಲ್ಲಿ ಪ್ರಯೋಗಿಸಿ ಅಭಿನಯಿಸಬೇಕು ಇಲ್ಲವೆ ಅನೇಕ ಅಕ್ಷರಗಳ ನಾನಾರ್ಥಗಳುಳ್ಳ ತೋಟಕವೃತ್ತದ ಶ್ಲೋಕವನ್ನು ಬಳಸಬೇಕು ಎರಡು ಅಥವಾ ಒಂದು ಅಥವಾ ಮಿಶ್ರಪಂಚಪಾಣಿ ತಾಲದಲ್ಲಿರಬೇಕು. ಶೀರ್ಷಿಕದಲ್ಲಿ ಹೆಚ್ಚಾಗಿ ಗುರು ಅಕ್ಷರಗಳಿದ್ದು ಅದನ್ನು ಎಂಟು ಸನ್ನಿಪಾತಗಳುಳ್ಳ ಯಥಾಕ್ಷರ ತ್ರ್ಯಸ್ರತಾಲದಲ್ಲಿ ಪ್ರಯೋಗಿಸಬೇಕು. ಈ ಲಾಸ್ಯಪ್ರಕಾರದಲ್ಲಿ ಕ್ರೀಡೆಗಳು ಇರುತ್ತವೆ, ಅವನ್ನು ವಿವಧ ಮತ್ತು ಏಕಕಗಳ ಜೊತೆಗೂಡಿಸಿದ ಹಾಡುಗಳಿಂದ ಪ್ರಯೋಗಿಸಬೇಕು. ಕೈಶಿಕೀ ವರ್ಗಕ್ಕೆ ಸೇರಿದೆ ಎಂಬ ಲಕ್ಷಣಗಳನ್ನು ನೀಡುತ್ತಾನೆ. ಅಭಿನವಗುಪ್ತನು ಪ್ರಚ್ಛೇದಕಕ್ಕೆ ಬೆಳದಿಂಗಳಿಂದ ವಿರಹಕ್ಕೊಳಗಾಗಿದ್ದ ಸ್ತ್ರೀಯರು ತಮ್ಮ ಪ್ರಿಯಕರನು ತಮ್ಮಲ್ಲಿ ತಪ್ಪನ್ನೇ ಮಾಡಿದ್ದರೂ ಆತನ್ನೇ ಆಶ್ರಯಿಸಿದ್ದಾರೆ, ಬೆಳದಿಂಗಳನ್ನು ನೋಡಿ ಸಂತೋಷಗೊಂಡ ನಾಯಿಕೆಯು ದ್ರಾಕ್ಷಾರಸದಲ್ಲಿಯೂ, ಕನ್ನಡಿಯಲ್ಲಿಯೂ, ನೀರಿನಲ್ಲಿಯೂ ತನ್ನ ಪ್ರಿಯತಮನ ಪ್ರತಿಬಿಂಬವನ್ನೇ ಕಾಣುತ್ತಾಳೆ, ನಾಯಕನು ನಾಯಿಕೆಯಲ್ಲಿ ತಪ್ಪನ್ನು ಮಾಡಿದಾಗ ಬೆಳದಿಂಗಳು ಆಕೆಯ ಕೋಪವನ್ನು ಶಮನಮಾಡುವಲ್ಲಿ ಸಹಕರಿಸುತ್ತದೆ, ಎಂದು ಹೇಳುತ್ತಾನೆ. ಪ್ರಚ್ಛೇದಕದ ಈ ಲಕ್ಷಣಗಳು ರತ್ನಾವಳಿಯಲ್ಲಿ ಆಗಾಗ್ಗ ಪ್ರಯೋಗಿಸಲ್ಪಟ್ಟಿದೆಯೆಂದು ವಿದ್ವಾಂಸರು ಹೇಳಿದ್ದಾರೆ. ನಾನ್ಯದೇವ, ಹಾಗೂ ಭೋಜರು ನೀಡಿರುವ ಪ್ರಚ್ಛೇದಕದ ಲಕ್ಷಣಗಳು ನಾಟ್ಯಶಾಸ್ತ್ರವನ್ನು ಹೋಲುತ್ತವೆ. ಭೋಜನು, ಬೆಳದಿಂಗಳಿನಿಂದ ವಿರಹಕ್ಕೊಳಗಾದ ರಾಧೆಯು ತನ್ನ ಪ್ರಿಯಕರನಾದ ಕೃಷ್ಣನನ್ನು ಭೇಟಿಯಾಗುವ ವಿಪ್ರಲಂಭ ಶೃಂಗಾರದ ಸಮಯವನ್ನು ಭೆಜ್ಜಳನ 'ರಾಧಾವಿಪ್ರಲಂಭ'ವೆಂದೇ ಪ್ರಸಿದ್ಧವಾದ, ಸೈಂಧವ ಭಾಷೆಯ ಬಾಹುಳ್ಯವುಳ್ಳ 'ರಾಸಕಾಂಕ'ದಿಂದ ಉದಾಹರಣೆಯನ್ನೀಯುತ್ತಾನೆ. ಶಾರದಾತನಯನು ಈ ಲಾಸ್ಯಾಂಗವು ಸ್ಪಷ್ಟವಾಗಿ, ನಾಯಕಿಯು ತನ್ನ ಪ್ರಿಯಕರನು ಬೇರೊಬ್ಬಳನ್ನು ಸೇರಿದ್ದಾನೆಂಬ ಸಂಶಯದಿಂದ ಕೋಪಗೊಳ್ಳುವುದನ್ನು ಹೇಳುತ್ತದೆ, ಎಂದು ಹೇಳುತ್ತಾನೆ. ಸಾಗರನಂದಿಯೂ ಈ ಲಕ್ಷಣವನ್ನೆ ಹೇಳಿದರೂ ಮತ್ಸರಗೊಂಡ ಪ್ರೌಢಾ ನಾಯಿಕೆಯು ನಾಯಕನು ತನಗೆ ಮೋಸ ಮಾಡಿದ್ದನ್ನು ನೆನೆದು ಕೋಪದಿಂದ ತನ್ನನ್ನು ಇಚ್ಛಿಸಿದ ಬೇರೊಬ್ಬ ಪ್ರಿಯಕರನ ಬಳಿಸಾರುತ್ತಾಳೆಂಬ ಎಂಬ ಲಕ್ಷಣವನ್ನು ಶಾರದಾತನಯನಿಗಿಂತ ಸ್ವಲ್ಪ ವ್ಯತ್ಯಾಸದಲ್ಲಿ ಹೇಳಿದ್ದಾನೆ. ವಿಶ್ವನಾಥನು ಪ್ರಚ್ಛೇದಕ ಲಾಸ್ಯಾಂಗವು ತನ್ನ ಪತಿಯು ಬೇರೊಬ್ಬಳಲ್ಲಿ ಅನುರಾಗವಿಟ್ಟು ತನ್ನನ್ನು ಮೋಸ ಮಾಡಿದ್ದಾನೆಂದು ಕೋಪಗೊಂಡ ನಾಯಿಕೆಯು ವೀಣೆಯನ್ನು ನುಡಿಸುತ್ತ ಗಾಯನ ಮಾಡುವುದೆಂಬುದಾಗಿ ಲಕ್ಷಣವನ್ನಿತ್ತಿದ್ದಾನೆ. ಕುಂಭಕರ್ಣನು ಇದೇ ಲಕ್ಷಣಗಳನ್ನು ಹೇಳಿ ಮೂರು ಸಂಸ್ಕೃತ ಶ್ಲೋಕಗಳನ್ನು ಉದಾಹರಣೆಗಾಗಿ ನೀಡಿದ್ದಾನೆ. ಶುಭಂಕರನು ಮೊದಲಿಗೆ ವಿಶ್ವನಾಥನಂತೆಯೆ ಲಕ್ಷಣವನ್ನಿತ್ತರೂ ಇನ್ನೊಂದು ಲಕ್ಷಣವನ್ನೂ ಕೊಟ್ಟಿದ್ದಾನೆ. ಅದರಲ್ಲಿ ಪ್ರಚ್ಛೇದಕ ಲಾಸ್ಯಾಂಗದಲ್ಲಿ ಅನ್ಯಸ್ತ್ರೀಯಲ್ಲಿ ಅನುರಾಗಗೊಂಡ ನಾಯಕನು ತನ್ನಲ್ಲಿ ಪ್ರೀತಿ ತೋರದ್ದರಿಂದ ಪೀಡಿತಳಾದ, ಕಡುಕೋಪಗೊಂಡ ನಾಯಿಕೆಯು ಇರುತ್ತಾಳೆ ಎಂಬುದಾಗಿದೆ.

**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)**

**ಸಂಚಿಕೆ 1; ಸಂಪುಟ 14 ; ಜನವರಿ –ಏಪ್ರಿಲ್ 2020 ; ಅಂಕಣ- ಭರತಕೌತುಕ**

## ತ್ರಿಮೂಢಕ

ನಾಟ್ಯಂಪುಂಭಾವಭೂಯಿಷ್ಟಂ ಸಮವೃತ್ತವಿಭೂಷಿತಮ್
ಅನಿಷ್ಠುರಶ್ಲಕ್ಷ್ಣಪದಂ ಯತ್ರಸ್ಯಾತ್ ತತ್ ತ್ರಿಮೂಢಮ್ ||೬೫||

ಪುರುಷಸ್ವಭಾವವನ್ನೇ ಹೆಚ್ಚಾಗಿ ಹೊಂದಿದ್ದು ಸಮವೃತ್ತಗಳಿಂದ ಅಂದವಾದ , ಮೃದುವಾದ, ಪ್ರಿಯವಾದ ಮಾತುಗಳನ್ನುಳ್ಳ ನಾಟ್ಯ ಎಲ್ಲಿರುತ್ತದೆಯೋ ಅದು ತ್ರಿಮೂಢಕ.

ತ್ರಿಮೂಢಕದಲ್ಲಿ ಕರ್ಕಶವಲ್ಲದಂತಹ ಮೃದುಶಬ್ದಗಳ ಹಾಡನ್ನು ಎರಡು ಕಲಾಗಳ ಚಂಚತ್ಪುಟ ತಾಲದಲ್ಲಿ ಗಾಂಧಾರಿ ಜಾತಿಯಲ್ಲಿ ಹಾಡಬೇಕು. ಯುಕ್ತವಾದ ಸಂಖ್ಯೆಯ ಕಲಾಗಳ ತಾಲದಲ್ಲಿ ವಿದಾರಿ ಮತ್ತು ವಿವಧಗಳೊಡನೆ ಸಮರ್ಪಕವಾದ ಮಾರ್ಗದಲ್ಲಿ 64 ಸನ್ನಿಪಾತಗಳೊಡನೆ ಹಾಡಬೇಕು. ಆದರೆ ಇದರಲ್ಲಿ ಅಂಗಹಾರವಾಗಲಿ, ವಿಷ್ಕಂಭವಾಗಲೀ ಇರಕೂಡದು, ಪದವು ನಾಟಕಕ್ಕೆ ಸಂಬಂಧಿಸಿದ್ದಿರಬೇಕು, ಅನೇಕ ರಸಗಳುಳ್ಳ ಇದನ್ನು ಪುರುಷನಂತೆ ರೀವಿಯಲ್ಲಿ ಅದನ್ನು ನುಡಿಯಬೇಕು, ನಟ್ಕುಟಕ ಮತ್ತು ಖಂಜಕಗಳನ್ನು ಹಾಡಬೇಕು ಎಂಬುದಾಗಿ ಭರತನು ಲಕ್ಷಣವನ್ನು ಹೇಳಿದ್ದಾನೆ. ಈ ಲಕ್ಷಣದ ಕಡೆಯ ವಾಕ್ಯಕ್ಕೆ ನಿರ್ಣಯಸಾಗರ ಮತ್ತು ಬಡೋದಾ ಆವೃತ್ತಿಗಳಲ್ಲಿ 'ಹಾಡಬಾರದು' ಎಂಬ ಪಾಠವಿದೆ ! ಅಭಿನವಗುಪ್ತನು, ಈ ಲಾಸ್ಯಾಂಗದಲ್ಲಿ ಮೂವರ ನಡುವೆ ಏರ್ಪಡುವ ಮೋಹಪರವಶತೆ ಅಥವಾ ಗೊಂದಲವೇರ್ಪಡುತ್ತದೆ, ಎಂದರೆ ನಾಯಕನ ಮೋಸದ ವಿಹಾರವನ್ನು ಕುರಿತಾಗಿ ಒಬ್ಬಳಿಗೆ ಹಗೆತನವೇರ್ಪಟ್ಟಾಗ, ಹಾಗೂ ನೂತನ ನಾಯಕಿಯು ತನಗೆ ಏರ್ಪಟ್ಟ ಪ್ರೇಮಾಂಕುರದಿಂದ ನಾಚಿಕೆಯುಳ್ಳವಳಾದ ಸಂದರ್ಭ ಇತ್ಯಾದಿ ಸಮಯದಲ್ಲಿ ನಾಯಕನ ಮಾತುಗಳು ಸೂಕ್ಷ್ಮತರವಾಗಿ, ನವುರಾಗಿ, ಮೃದುವಾಗಿ, ಪ್ರಿಯಕರವಾಗಿ ಇರಬೇಕಾಗುತ್ತದೆ, ಅಂತಹ ಭಾಗಗಳ ವಾಚಿಕವು ಉತ್ಕೃಷ್ಟವಾದ ಶಬ್ದಾಲಂಕಾರಗಳಿಂದ ಕೂಡಿದ್ದು ಅಂತಹ ಭಾವನೆಗಳನ್ನು ಪ್ರಚೋದಿಸುವ, ಅಭಿಘಾತವನ್ನುಂಟುಮಾಡುವ ಸಮರ್ಪಕ ವೃತ್ತಗಳನ್ನುಪಯೋಗಿಸಬೇಕು ಎಂದು ವಿವರಿಸಿದ್ದಾನೆ. ನಾನ್ಯದೇವನು ಈ ಲಾಸ್ಯಾಂಗವನ್ನು ಮೂಢಕವೆಂದು ಕರೆದಿದ್ದು ಇದು ನಾಯಕನ ಗುಣಗಳನ್ನು ಕುರಿತಾದ ಪ್ರಶಂಸೆಯಿಂದ ಶೋಭಾಯಮಾನವಾಗಿರುತ್ತದೆ ಎಂದಿದ್ದಾನೆ. ಧನಂಜಯನು ತ್ರಿಗೂಢಕವೆಂದು ಕರೆದಿದ್ದಾನೆ. ಭೋಜ ಮತ್ತು ಶಾರದಾತನಯರು ನಾಟ್ಯಶಾಸ್ತ್ರದಂತೆ ಲಕ್ಷಣಗಳನ್ನು ನೀಡಿದ್ದಾರೆ. ಭೋಜನು ಭೋಜನು ಇದಕ್ಕೆ ರತ್ನಾವಳಿಯ ಎರಡನೆಯ ಅಂಕದಲ್ಲಿರುವ ರಾಜನ ಸಂಭಾಷಣೆಗಳ ಉದಾಹರಣೆಗಳನ್ನು ನೀಡಿದ್ದಾನೆ. ಸಾಗರನಂದಿಯು ಇದನ್ನು ವೈಮೂಢಕವೆಂದು ಕರೆದಿದ್ದು ಈ ಲಾಸ್ಯಾಂಗವು ಪುರುಷನು ಸ್ತ್ರೀಯಂತೆ ಉಡುಪನ್ನು ಧರಿಸಿ, ಸ್ತ್ರೀಯಂತೆಯೇ ನಡಿಗೆ ನಡವಳಿಕೆಗಳನ್ನು ಸಹ ತೋರುವುದು. ಇದಕ್ಕೆ ಭವಭೂತಿಯು ರಚಿಸಿದ ಮಾಲತೀಮಾಧವದಲ್ಲಿ, ಗುಟ್ಟಾದ ವಿವಾಹದ ಸಮಯದಲ್ಲಿ ಮಕರಂದನು ಮಾಲತಿಯ ವೇಷವನ್ನು ಧರಿಸಿ ಬಂದ ಉದಾಹರಣೆಯನ್ನು ನೀಡುತ್ತಾನೆ. ವಿಶ್ವನಾಥನು ಈ ಲಾಸ್ಯಾಂಗವನ್ನು ತ್ರಿಗೂಢಕವೆಂದು ಕರೆದು ಇದು ಸ್ತ್ರೀ ವೇಷ ಧರಿಸಿದ ಪುರುಷರ ನಾಟ್ಯವೆನ್ನುತ್ತಾನೆ. ರಾಣಾಕುಂಭನು ಇದು ವಿವಿಧ ವರ್ಣನೆಗಳನ್ನುಳ್ಳ ವಾಚಿಕವೆಂದೂ, ಆಕರ್ಷಕವಾದ ಸಮವೃತ್ತಗಳಲ್ಲಿ ರಚಿತವಾದ ರಚನೆಗಳೆಂದು ಎರಡು ಸಂಸ್ಕೃತ ಶ್ಲೋಕಗಳನ್ನು ಉದಾಹರಣೆಗಾಗಿ ನೀಡಿದ್ದಾನೆ. ಶುಭಂಕರನು ಸಾಗರನಂದಿಯಂತೆಯೆ ಇದನ್ನು ವೈಮೂಢಕವೆಂದು ಕರೆದಿದ್ದು ಅವನಂತಯೇ

Copyright protected

ವರ್ಣಿಸಿದ್ದಾನೆ. ಸಾಹಿತ್ಯದರ್ಪಣದಲ್ಲಿ ತ್ರಿಗೂಢಕವೆಂಬ ಶಬ್ದಕ್ಕೆ ವಾಚಿಕ, ಆಹಾರ್ಯ ಮತ್ತು ವರ್ತನೆಗಳು ಗೂಢವಾಗಿರುತ್ತವೆಂದು ಅರ್ಥವನ್ನು ಹೇಳಿದೆ.

1..ನಾಟ್ಯ — ನಾಟ್ಯವೆಂಬುದು ನಟ್ ಎಂಬ ಮೊದಲನೆಯ ಭ್ವಾದಿಗಣಕ್ಕೆ ಸೇರಿದ ಪರಸ್ಮೈಪದಿ ಧಾತುವಿನಿಂದ ಶಬ್ದ. ನಟ್ ಎಂಬುದು ನೃತ್ ಧಾತುವಿನ ಉಚ್ಚಾರಣಾ ಶೈಥಿಲ್ಯ ಅಥವಾ ಅಪಭ್ರಂಶದಿಂದ ಹುಟ್ಟಿರುವ ಪ್ರಾಕೃತ ರೂಪವೆಂದು ಮೋನಿಯರ್ ವಿಲಿಯಮ್ಸ್ ನು ಅಭಿಪ್ರಾಯ ಪಡುತ್ತಾನೆ. ನೃತ್ತ, ನೃತ್ಯ ಮತ್ತು ನರ್ತನಗಳು ನೃತ್ ಎಂಬ ನಾಲ್ಕನೆಯ ದಿವಾದಿಗಣಕ್ಕೆ ಸೇರಿದ ಪರಸ್ಮೈಪದಿ ಧಾತುವಿನಿಂದ ಆದವುಗಳು. ಪಾಣಿನಿಯು ನಟ್ ಧಾತುವಿವೇಚನಾ ಮೂಲಕವಾಗಿ ಕೃಶಾಶ್ವ ಶಿಲಾಲಿನ್ ಎಂಬ ಪೂರ್ವಾಚಾರ್ಯಕೃತ ನಟಸೂತ್ರವೆಂಬ ಗ್ರಂಥವೊಂದರ ಹೆಸರನ್ನು ಹೇಳುತ್ತಾನೆ. ಇದರಲ್ಲಿ ಕೃಶಾಶ್ವನೆಂಬುದು ವೈದಿಕ ಸಂಪ್ರದಾಯವೊಂದರ ಪ್ರವರ್ತಕನೆಂಬುದು ಪಾಣಿನಿಯಿಂದಲೇ ತಿಳಿಯುತ್ತದೆ. ಇವನಿಗೆ ನಾಟ್ಯಶಾಸ್ತ್ರಕ್ಕೆ ಏನು ಸಂಬಂಧವಿತ್ತೆಂದು ಹೇಳಲು ಮತ್ತೇನೂ ಆಧಾರವಿಲ್ಲದ. ಶಿಲಾಲಿ ಎಂಬುದೂ ನಟಸೂತ್ರವನ್ನು ರಚಿಸಿದವನು. ವೇದಸಂಪ್ರದಾಯವೊಂದರ ಪ್ರವರ್ತಕನ ಹೆಸರು. ಋಗ್ವೇದದ ಚರಣ ವೊಂದರಲ್ಲಿ ಬೆಳೆದುಬಂದು ಈ ಪರಂಪರೆಯ ಬ್ರಾಹ್ಮಣರನ್ನು ಶೈಲಾಲ, ಶೈಲಾಲಿನ್ ಎಂದು ಮುಂತಾಗಿ ಶ್ರೌತಸೂತ್ರಾದಿ ಗ್ರಂಥಗಳು ಗುರುತಿಸುತ್ತವೆ. ಗೀತವಾದ್ಯನೃತ್ತಗಳ ಸಮುಚ್ಚಯಕ್ಕೆ ಸಂಗೀತ ಎಂಬ ಹೆಸರು ಸುಮಾರು 12ನೆಯ ಶತಮಾನದ ವೇಳೆಗೆ ಬಂದು ನಿಲ್ಲುವುದಕ್ಕಿಂತ ಮೊದಲು ನಾಟ್ಯವೆಂಬ ಹೆಸರೂ ಅದಕ್ಕೆ ಇದ್ದಂತೆ ಹೇಮಚಂದ್ರ, ಅಮರಸಿಂಹ ಮುಂತಾದವರಿಂದ ತಿಳಿಯುತ್ತದೆ. ಅವರುಗಳು ಸಂಗೀತ =ತೌರ್ಯತ್ರಿಕ = ನಾಟ್ಯ =ಪ್ರೇಕ್ಷಣ ಎಂಬ ಸಮೀಕರಣವನ್ನು ಹೇಳುತ್ತಾರೆ. ನಂತರದ ಸಂಸ್ಕೃತ ಸಾಹಿತ್ಯದಲ್ಲಿ ನಾಟ್ಯವು ನಾಟಕಪ್ರಧಾನವಾದ ಪ್ರಯೋಗಕ್ಕೆ ಹೆಸರಾಯಿತು. ಕಾಳಿದಾಸನ ಕಾವ್ಯನಾಟಕಗಳು ಈ ದೃಷ್ಟಿಯಿಂದ ಪ್ರಾತಿನಿಧಿಕವಾಗಿವೆ. ಕಾಳಿದಾಸನು ಮಾಲವಿಕಾಗ್ನಿಮಿತ್ರದಲ್ಲಿ ನಾಟ್ಯ ಶಬ್ದವನ್ನು ಸಂಗೀತ ಶಬ್ದದಂತೆಯೂ, ಲೋಕಚರಿತದ ಅನುಕರಣೆಯನ್ನು ಎಂದರೆ ನಾಟಕಾರ್ಥವನ್ನು ಸಾತ್ವಿಕಾಂಗಿಕ ವಾಚಿಕಾಭಿನಯಯುಕ್ತವಾದುದನ್ನು ನಾಟ್ಯ ಶಬ್ದದಂತೆ ಎರಡು ರೀತಿಯಲ್ಲಿ ಹೇಳಿದ್ದಾನೆ. ನಟ್ ಎಂದರೆ ಕುಣಿ, ಅನುಕರಿಸು, ಅಣಕವಾಡು, ನಾಟಕೀಯವಾಗಿ ಅಭಿನಯಿಸು ಮುಂತಾದ ಅರ್ಥಗಳಿವೆ. ನಾಟ್ಯ ಎಂಬುದು ಈ ಕ್ರಿಯೆಗಳ ಹೆಸರಷ್ಟೆ. ಇದನ್ನು ಶಾಸ್ತ್ರನಿರೂಪಣೆಯ ಸಂದರ್ಭದಲ್ಲಿ ನೋಡುವುದು ನಾಟ್ಯಶಾಸ್ತ್ರದಲ್ಲಿಯೆ ಮೊದಲು. ನಾಟ್ಯವು ನೃತ್ತ ನೃತ್ಯ ನರ್ತನಗಳನ್ನೊಳಗೊಂಡುದುದೆಂದು ಹೇಳಿ ನಾಟ್ಯದ ಲಕ್ಷಣವನ್ನು ನಾನಾಭಾವೋಪಸಂಪನ್ನ, ನಾನಾವಸ್ಥಾಂತರಾತ್ಮಕ, ಲೋಕವೃತ್ತಾನುಕರಣ. ಉತ್ತಮಮಧ್ಯಮರಾದ ಮನುಷ್ಯರ ಕರ್ಮಸಂಶ್ರಯ, ಹಿತೋಪದೇಶಜನನ. ಧೃತಿಕ್ರೀಡಾಸುಖಾದಿಕಾರಕ ಎಂದು ವರ್ಣಿಸಿದ್ದಾನೆ. ಇಲ್ಲಿಲ್ಲದ ಜ್ಞಾನ, ಶಿಲ್ಪ, ವಿದ್ಯೆ, ಕಲೆ. ಯೋಗ, ಕರ್ಮ ಬೇರೆಡೆ ಇಲ್ಲ. ದೇವತೆಗಳ, ರಾಕ್ಷಸರ, ರಾಜರ, ಕುಟುಂಬಿಗಳ. ಬ್ರಹ್ಮರ್ಷಿಗಳ ವೃತ್ತಾಂತವನ್ನು ಹೇಳುವಂತಹದು, ಸುಖದುಃಖಸಮನ್ವಿತವಾದ ಲೋಕದ ಸ್ವಭಾವವನ್ನು ಅಂಗಾದಿಗಳಿಂದ ಅಭಿನಯಿಸಿ ತೋರಿಸುವಂತಹದು ಎಂದು ಭರತನು ನಾಟ್ಯವನ್ನು ಲಕ್ಷಿಸುತ್ತಾನೆ. ಇದಕ್ಕೆ ಬೇಕಾಗುವ ಕಲೆಯನ್ನೆಲ್ಲವನ್ನೂ ನಾಟ್ಯದ ಪರಿಮಿತಿಯಲ್ಲಿಯೇ

Copyright protected

ಸೇರಿಸಿಕೊಂಡು ಇವುಗಳ ಸಂಶ್ರಯವೇ ನಾಟ್ಯ ಎಂದು ಲಕ್ಷಣವನ್ನು ಹೇಳಬೇಕು. ಎಂದರೆ ನಾಟ್ಯವು ಹಾಡು, ಬಾಜನೆ ಮತ್ತು ಕುಣಿತಗಳನ್ನು ಒಳಗೊಂಡ ನಾಟಕ ಪ್ರಯೋಗವಾಗುತ್ತದೆ. ಧನಂಜಯನು ಭಾವದ ವಿವಿಧ ಸ್ಥಿತಿಗೆ ಅನುಕರಣ ವೇ ನಾಟ್ಯ, ರೂಪಕಗಳಲ್ಲಿಯಚಿತ್ರಿತವಾದ ಧೀರೋದಾತ್ತ ಮೊದಲಾದ ನಾಯಕರ ಅವಸ್ಥೆಗಳನ್ನು ಅಭಿನಯದ ಮೂಲಕ ಅನುಕರಿಸುವುದೇ ನಾಟ್ಯ ಎಂದು ಹೇಳಿದ್ದಾನೆ. ನಂದಿಕೇಶ್ವರನ ಮತದಲ್ಲಿ ಪೂರ್ವಕಥೆಯುಳ್ಳ ನಾಟಕವೇ ನಾಟ್ಯ. ಸೋಮೇಶ್ವರನಿಂದ ವ್ಯಾಪಕಾರ್ಥವನ್ನು ಪಡೆದು ಶಾರ್ಙ್ಗದೇವನು ರಸಾಭಿವ್ಯಕ್ತಿಗೆ ಕಾರಣವಾದುದು ನಾಟ್ಯ ಎಂದು ಸೌಂದರ್ಯಾರ್ಥಸನ್ನಿವಿಷ್ಟವಾದ ಲಕ್ಷಣವನ್ನು ಹೇಳುತ್ತಾನೆ. ನಾಟ್ಯದಲ್ಲಿ ರಸವೇ ಮುಖ್ಯ. ಆಂಗಿಕ, ವಾಚಿಕ, ಆಹಾರ್ಯ. ಸಾತ್ತ್ವಿಕ ಎಂಬ ನಾಲ್ಕು ಅಭಿನಯಗಳ ಒಟ್ಟುಗೂಡಿ ನಾಟ್ಯವೆನ್ನಿಸಿಕೊಳ್ಳುತ್ತವೆ. ನರ್ತನವೇ ಲಕ್ಷಣಾರ್ಥದಲ್ಲಿ ನಾಟ್ಯವೆನ್ನಿಸಿಕೊಳ್ಳುತ್ತದೆಯೆಂದು ತನ್ನ ನಿರೂಪಣೆಯಲ್ಲಿ ಹೇಳುತ್ತಾನೆ. ನಾಟ್ಯವೆಂದರೆ ನಾಟಕ ಸಂದರ್ಭಗಳಲ್ಲಿ ಮಾತ್ರ ಅಡಕವಾಗಿರುವ ಅಭಿನಯ ವಿಧ ಎಂಬ ಮಾತನ್ನು ಮೊದಲಿಗೆ ಶಾರ್ಙ್ಗದೇವನು ಸ್ಪಷ್ಟಪಡಿಸುತ್ತಾನೆ. ಶಾರದಾತನಯನು ನಾಟ್ಯವೆಂದರೆ ನಾಟಕದಲ್ಲಿ ಬರುವ ವಾಕ್ಯಾರ್ಥ, ಪದಾರ್ಥಗಳ ಅಭಿನಯವನ್ನು ಮಾಡುವ ನಟಕರ್ಮ ಎಂದು ಆಧುನಿಕಾರ್ಥಕ್ಕೆ ಪರಸ್ಪರವಾದ ಅರ್ಥವನ್ನು ಬರೆಯುತ್ತಾನೆ.

ನಾಟ್ಯವು ಲೋಕಧರ್ಮೀ, ನಾಟ್ಯಧರ್ಮೀ ಎಂದು ಎರಡು ವಿಧ. ಲೋಕಧರ್ಮೀಯೆಂದರೆ ವಸ್ತುನಿಷ್ಠವಾದ ಪ್ರಯೋಗ. ಇದರಿಂದ ಲೌಕಿಕವಾದ ಶೋಭೆ ನಾಟ್ಯಕ್ಕೆ ಉಂಟಾಗುತ್ತದೆ. ಎಂದರೆ ಲೋಕಸಹಜವಾದ, ಸಾಮಾನ್ಯವಾದ ವಸ್ತುಗಳಿಗೆ ಇದರಿಂದ ರಂಜನಾಶಕ್ತಿ ಹೆಚ್ಚುತ್ತದೆ. ನಾಟ್ಯಧರ್ಮೀಯೆಂದರೆ ಈ ಕಲೆಯ ಶಾಸ್ತ್ರದಲ್ಲಿ ಹೇಳಿರುವಂತೆ, ಕೇವಲ ಆದರ್ಶಸ್ವರೂಪದ ಅಭಿನಯವನ್ನು ಮಾಡುವುದು. ಎಂದರೆ ಸಹಜವಾಗಿ ಸ್ಫುರಿಸುವ ಅರ್ಥಗಳನ್ನು ಬಿಟ್ಟು ಕಲಾಸಂಪ್ರದಾಯದಿಂದ ನಿಯೋಜಿತವಾದ ಅರ್ಥಗಳನ್ನು ಅಭಿನಯಿಸುವುದು. ಇವೆರಡೂ ಚಿತ್ತವೃತ್ತ್ಯರ್ಪಿಕಾ, ಬಾಹ್ಯವಸ್ತು - ಅನುಕಾರಿಣೀ ಎಂದು ಎರಡು ವಿಧ. ಕೇವಲ ಮಾನಸಿಕವಾದ ಗರ್ವ, ರೋಷ, ಸಂತೋಷ ಮೊದಲಾದುವುಗಳನ್ನು ಅಭಿನಯಿಸುವುದು ಚಿತ್ತವೃತ್ತಿ - ಅರ್ಪಿಕಾ, ಬಾಹ್ಯವಸ್ತುಗಳಾದ ಬಿಲ್ಲು, ಹೂವು, ವೃಕ್ಷ, ಮೃಗ ಮೊದಲಾದುವುಗಳನ್ನು ಸೂಚಿಸಿ ಅಭಿನಯಿಸುವುದು ಬಾಹ್ಯವಸ್ತು-ಅನುಕಾರಿಣೀ. ನಾಟ್ಯಪ್ರಯೋಗದಲ್ಲಿ ವಾಚಿಕಾಭಿನಯ, ಆಂಗಿಕಾಭಿನಯ ಮತ್ತು ಸಾತ್ತ್ವಿಕಾಭಿನಯಗಳಿಂದ ಭಾವಗಳಾಗುತ್ತವೆ. ರಸವನ್ನಾದರೋ ಇವುಗಳೊಡನೆ ಆಹಾರ್ಯವನ್ನು ಕೂಡಿಸಿ ಈ ನಾಲ್ಕರ ಸಮುಚ್ಚಯದಿಂದ ಅಭಿನಯಿಸಬೇಕು ಎಂಬ ಪ್ರಮಾಣವಾಕ್ಯವನ್ನು ಕಲ್ಲಿನಾಥನು ಆಕರಸ್ಮರಣೆಯಿಲ್ಲದೆ ಉದ್ಧರಿಸಿಕೊಳ್ಳುತ್ತಾನೆ. ಸುಮಾರು 14 ನೆಯ ಶತಮಾನದಲ್ಲಿ ವಿಪ್ರದಾಸನು ತನ್ನ ಸಂಗೀತಚಂದ್ರದಲ್ಲಿ ಆಂಗಿಕಾಭಿನಯವುಳ್ಳ ನೃತ್ಯವನ್ನು ನಾಟ್ಯವೆಂದು ಕರೆಯುವುದುಂಟು ಎಂಬ ಚಾರಿತ್ರಿಕಾಂಶವನ್ನು ಹೇಳಿದ್ದಾನೆ. ಸುಮಾರು ಹದಿನೈದನೆಯ ಶತಮಾನದಲ್ಲಿ ನೃತ್ಯವೆಂದರೆ ನಾಟ್ಯವೆಂಬ ಬಳಕೆಯೇ - ಕುಣಿತವೇ ಮುಖ್ಯ ಅಂಗವಾಗಿ - ಆದರೆ ರಸಪ್ರಕಾಶನವು ಮುಖ್ಯ ಧ್ಯೇಯವಾಗಿ - ಶಾಸ್ತ್ರ ಪರಿಭಾಷೆಯಲ್ಲಿಯೂ ಆಡುಮಾತಿನಲ್ಲಿಯೂ ಪ್ರಚುರವಾಯಿತು.

==========================================================

ಆಕರ ಋಣ —

#.. ಪುಂಡರೀಕಮಾಲಾ — ರಾ. ಸತ್ಯನಾರಾಯಣ.

#.. ಕರ್ಣಾಟಕಸಂಗೀತವಾಹಿನಿ —ರಾ. ಸತ್ಯನಾರಾಯಣ

#.. ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ — ರಾ. ಸತ್ಯನಾರಾಯಣ.

#.. ನಾಟ್ಯಶಾಸ್ತ್ರ — ಆದ್ಯ ರಂಗಾಚಾರ್ಯ.

#.. ಧನಂಜಯ ವಿರಚಿತಂ ದಶರೂಪಕಂ —ಎಸ್. ವಿ. ಭೀಮಭಟ್ಟ.

#.. archive.org: Natya Shastra

#.. Abhinavagupta's Treatment of Lasyangas — G. H. Tarlekar.

#.. Indian ಕಾವ್ಯ Literature, Volume 4.— A. K. Warder.

#.. The Sahithya-Darpana or Mirror of Composition of Vishvanatha — J. R. Ballantyne, Pramada Dasa Mitra.

Copyright protected